ಶ್ರೀ ಆರ್. ಎಲ್. ಜಾಲಪ್ಪ.---ನನ್ನಿಂದ ಈ ತಪ್ಪು ಆಗಿದೆ. ನಾನು ಇದು ನಾಳುರಲ್ ಕೋರ್ಸ್ ನಲ್ಲಿ ಇದು ಬರುತ್ತದೆ ಎಂದು ನಾನು ತಿಳಿದುಕೊಂಡಿದ್ದೆ. ಈಗ ಇದು ಗೊತ್ತಾಗಿದೆ. ಪಯುವಿಟ್ಟು ಕ್ಷಮಿಸಬೇಕು.

ಶ್ರೀ ಬಿ. ಸ್ವಾಮಿರಾವ್.---ಇದನ್ನು ಕನ್ನಡದಲ್ಲಿ ಕಳಿಸಿಲ್ಲ. ಇಂಗ್ಲೀಷ್‌ನಲ್ಲಿ ಕಳಿಸಿದ್ದಾರೆ. ನನಗೆ ಗೊತ್ತಾಗುವುದಿಲ್ಲ.

ಅಧ್ಯಕ್ಷರು.---ಕನ್ನಡದಲ್ಲಿ ತಿದ್ದುಪಡಿಯನ್ನು ತಂದರೆ ಏತಿ ಅಂದರೆ ಪ್ರೇತಿ ಆಗಿಬಿಡುತ್ತದೆ.

(ಕೆಲವು ಸದಸ್ಯರಿಂದ ಇದನ್ನು ಸೋಮವಾರ ತೆಗೆದುಕೊಳ್ಳಬೇಕೆಂದು ಆಗ್ರಹ)

ಅಧ್ಯಕ್ಷರು.---ಮಾನ್ಯ ಮಂತ್ರಿಗಳೇ ನನ್ನಿಂದ ಅಪರಾಧವಾಗಿದೆಯೆಂದು ಹೇಳಿದ್ದಾರೆ. ಇನ್ನೇನು ಮಾಡೋಣ ಸ್ವಾಮಿ ?

ಶ್ರೀ ಎನ್ ಹುಚ್ಚಮಾಸ್ತಿಗೌಡ.---ಮಾನ್ಯ ಮಂತ್ರಿಗಳು ಅವಕಾಶ ಕೊಟ್ಟರೆ ಒಂದು ಮಾತು. ಇದು ಬಹಳ ಮುಖ್ಯವಾದ ವಿಷಯ ಇದೆ. ಇದು ಕೆ. ಎಚ್. ಪಟೇಲರು ಕೊಟ್ಟಿರುವ ವರದಿ. ಇದರ ಬಗ್ಗೆ ಕಾಲಾವಕಾಶ ಕೊಟ್ಟು ಒಂದು ದಿವಸ ಚರ್ಚೆ ಮಾಡುವುದು ಸೂಕ್ತ. ಬೇಕಾದರೆ ಸೋಮವಾರ ಬೆಳ್ಳಿಗ್ಗೆ ಇಲ್ಲಿ ಸಭೆಸೇರಿ ಮಧ್ಯಾಹ್ನವೇ ಮೇಲ್ಮನೆಗೆ ಹೋಗುವ ಹಾಗೆ ಮಾಡೋಣ. ಆದರೆ ವಿಷಯ ತಿಳಿದುಕೊಂಡರೂ ಚರ್ಚೆ ಮಾಡದೆ ತಾವು ಕ್ಷಮಾಪಣೆ ಕೇಳಿದ್ದಕ್ಕೆ ತಮ್ಮನ್ನು ಕ್ಷಮಿಸಿದ್ದೇವೆ ಎಂದು ಒಪ್ಪಿಕೊಂಡು ಬಿಟ್ಟರೆ ಏನು ಪ್ರಯೋಜನ ? ನಿಮ್ಮನ್ನು ಕ್ಷಮಿಸಿದ್ದೇವೆ ಎಂದು ನಾವು ಹೋಗಬೇಕು ಆಷ್ಟೆ. ಇದನ್ನು ಚರ್ಚಿಸಲು ಕಾಲಾವಕಾಶ ಕೊಡಬೇಕು ಎನ್ನುವುದೇ ನನ್ನ ಪ್ರಾರ್ಥನೆ.

ಡಾ|| ವಿ. ಎಸ್. ಆಚಾರ್ಯ.---ಬೆಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾವು ಒಪ್ಪಿಕೊಂಡಿದ್ದು ಹೌದು. ರಾತ್ರಿ ಕಳಿಸಿದ್ದ ಲಕೋಟೆಯಲ್ಲಿ ಇದು ಇರಲಿಲ್ಲ. ಸಾಕಷ್ಟು ದೂರಗಾಮಿ ಪರಿಣಾಮ ಬೀರ ತಕ್ಕಂಥ ತಿದ್ದುಪಡಿ ಇದಾಗಿದೆ. ಈವತ್ತು ಇದು ಪಾಸ್ ಆಗಬೇಕೆಂದು ನಿನ್ನೆ ಹೇಳಿದ್ದರು. ಇದನ್ನು ಒಪ್ಪಿಕೊಂಡು ನಿನ್ನೆ ರಾತ್ರಿ ಇದಕ್ಕಾಗಿ ಬಹಳ ಹುಡುಕಾಡಬೇಕಾಯಿತು. ಈ ರೀತಿ ಮಾಡಬಹುದು ಎಂಬು ನನ್ನ ಸಲಹೆ. ಏನೆಂದರೆ ಸೋಮವಾರ ಹನ್ನೊಂದು ಗಂಟೆಗೆ ಬದಲು ಹತ್ತು ಗಂಟೆಗೇ ಸೇರೋಣ. ಮಧ್ಯಾಹ್ನದ ಮೇಲೆ ಇದನ್ನು ಕೌನ್ಸಿಲ್‌ನಲ್ಲಿ ತೆಗೆದುಕೊಳ್ಳಬಹುದು.

ಶ್ರೀ ಕೆ. ಎಚ್ ರಂಗನಾಥ್.---ಮಾನ್ಯ ಮಂತ್ರಿಗಳು ತಂದಿರುವುದರಲ್ಲಿ ಸದುದ್ದೇಶ ಇದೆ. ಆದರೆ ಬಹಳ ದೂರದ ಪರಿಣಾಮ ಬೀರತಕ್ಕಂಥ ಕಾನೂನುಗಳು ಇವೆ. ಅದರಲ್ಲೂ ಕೂಡ ಬಹಳ ಬುದ್ಧಿವಂತಿಕೆಯಿಂದ ಮಾಡಿದ್ದೀರಿ. ನಾನು ಆ ಪುಸ್ತಕವನ್ನು ಬಹಳ ಶ್ರಮಪಟ್ಟು ಹುಡುಕಿದೆ. ಮೊದಮೊದಲು ಏನೂ ಕಾಣದೆ ಇರುವ ಹಾಗೆ ಮಾಡಿದ್ದೀರಿ. ಆದರೆ ಬರುತ್ತಾ ಬರುತ್ತಾ ಕ್ಲಾಸ್ 20ರಲ್ಲಿ "ಸಜಾ" "ಫೈನ್" ಅಂತ ಇದೆ.

ಅಧ್ಯಕ್ಷರು.---ನೀವು ಚರ್ಚೆ ಪ್ರಾರಂಭ ಮಾಡಿಬಿಟ್ಟಿದ್ದೀರಿ.

ಶ್ರೀ ಕೆ. ಎಚ್. ರಂಗನಾಥ್.---ಸಾವಿರಗಟ್ಟಲೆ ಫೈನ್ ಅಂತ ಇದೆ. ತಾವು ನೋಡಿದಿರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.---ಕ್ಲಾಸ್ 20 ರಲ್ಲಿ ಏನು ತಂದಿದ್ದೇವೆ, ಅದು ಕೆ. ಎಚ್. ಪಾಟೀಲರ ಸಮಿತಿಯ ವರದಿಯಲ್ಲಿ ಇರುವುದೇ ಆಗಿದೆ. ಕ್ರಿಮಿನಲ್ ಪ್ರೊಸಿಜರ್ ಕೋರ್ಟ್‌ನಲ್ಲಿ ಏನಿಡೆ ಅಹರ ಪ್ರಕಾರವೇ ಇಂಟ್ರಡ್ಯೂಸ್ ಮಾಡಿದ್ದೇವೆ ವಿನಹ ಬೇರೇನೂ ಇಲ್ಲ. ತನುಗೆ ಚೆನ್ನಾಗಿ ಗೊತ್ತಿದೆ ಏಕೆಂದರೆ ತಾವು ಹಿಂದೆ ಸಹಕಾರ ರಂಗದಲ್ಲಿ ಮಂತ್ರಿಯಾಗಿದ್ದವರು. ಎಲ್ಲರ ಬಂಡವಾಳ ತನುಗೆ ಗೊತ್ತಿದೆ. ಇತ್ತೀಚೆಗೆ ಸಹಕಾರ ರಂಗ ಬೃಹಥಾಕಾರವಾಗಿ ಬೆಳೆದಿದೆ. ಜೊತೆಗೆ ಸಹಕಾರದ ಮೇಲೆ ಸಮಾಜದಲ್ಲಿ ನಂಬಿಕೆ ಹೋಗುತ್ತಿದೆ.

ಅಧ್ಯಕ್ಷರು.---ಈ ಒಂದು ನಿರ್ಣಯಕ್ಕೆ ಬರೋಣ. ಈಗ ಮಂತ್ರಿಗಳು ಎಕ್ಸ್‌ಪ್ಲೇನ್ ಮಾಡಿಬಿಡಲಿ.

ಶ್ರೀ ಆರ್. ಎಲ್. ಜಾಲಪ್ಪ.---ಇವತ್ತು ಏನಾಗಿದೆ ಎಂದರೆ ಇದು ಬಹಳ ಮಹತ್ವವುಳ್ಳ ವಿಷಯ.

## The Karnataka Co-operative Societies (Amendment) Bill, 1984
## Motion to consider

SRI R. L JALAPPA.---Sri, I beg to move ;

"That the Karnataka Co-operative Societies (Amendment) Bill 1984 be taken into consideration".

**The question was proposed

ಶ್ರೀ ಆರ್. ಎಲ್. ಜಾಲಪ್ಪ.--ಮಾನ್ಯ ಸದಸ್ಯರಿಗೆ ಈ ಗಾಗಲೇ ಗೊತ್ತಿದೆ ಏನೆಂದರೆ ಸಹಕಾರ ರಂಗ ಬಹಳ ಬೃಹದಾಕಾರವಾಗಿ ಬೆಳೆಯುತ್ತಿದೆ, 1450 ಕೋಟಿ ವರ್ಕಿಂಗ್ ಕ್ಯಾಪಿಟಲ್ ಇದೆ ಮತ್ತು ಅಷ್ಟೇ ಬೃಹದಾಕಾರವಾಗಿ ಇವತ್ತು ಸಹಕಾರ ರಂಗದಲ್ಲಿ ದುರುಪಯೋಗ ಮತ್ತು ಅವ್ಯವಹಾರ ಹಾಗೂ ಬಹಳಷ್ಟು ಅನ್ಯಾಯಗಳು ಆಗುತ್ತಿವೆ. ಇದನ್ನು ನಿಲ್ಲಿಸಬೇಕೆಂದು ಬಹಳ ಯೋಚನೆ ಮಾಡಿದೆವು. ಇಲ್ಲದಿದ್ದರೆ ಏನು ನಾಲ್ಕುನೂರು ಕೋಟಿ ಡಿಪಾಸಿಟ್ ನಮ್ಮ ಹತ್ತಿರ ಇದೆ, ಒಂದಾನೊಂದು ಕಾಲದಲ್ಲಿ ಅವರು ನಮ್ಮ ಮೇಲೆ ಅನುಮಾನಪಟ್ಟು ಈ ಹಣವನ್ನು ವಾಪಸ್ಸು ತೆಗೆದುಕೊಳ್ಳಬಹುದು. ಮತ್ತು ಯಾರಿಗೋಸ್ಕರ ಈ ಸಹಕಾರ ಸಂಘಗಳನ್ನು ಮಾಡಿದ್ದೇವೆ ಅವರಿಗೆ ಈ ಸಹಕಾರ ಸಂಘಗಳಿಂದ ಉಪಯೋಗ ಆಗದೇ ಇರಬಹುದು. ಉಪಯೋಗ ಆಗದೇ ಇರುವ ಸಂದರ್ಭ ಬಂದಾಗ ರಾಜ್ಯದ ಆರ್ಥಿಕ ಪರಿಸ್ಥಿತಿ ಮೇಲೆ ಬಹಳಷ್ಟು ದುಷ್ಪರಿಣಾಮ ಬೀರುತ್ತದೆ ಮತ್ತು ಸಹಕಾರ ಸಂಘಗಳನ್ನು ನಡೆಸುವವರೇ ಉಪಯೋಗ ಪಡೆಯುತ್ತಾರೆ. ಇದನ್ನು ಸ್ವಲ್ಪ ಕಾನೂನಿನ ಚೌಕಟ್ಟಿನಲ್ಲಿ ಸೇರಿಸಬೇಕೆಂದು ಬಹಳ ಸರಳವಾದ ಕೆಲವು ತಿದ್ದುಪಡಿಗಳನ್ನು ಮಾಡಿದ್ದೇವೆ. ಮಾನ್ಯ ರಂಗನಾಥ್ ಅವರು ಹೇಳಿದ ಹಾಗೆ ಸೆಕ್ಷನ್ 20 ರಲ್ಲಿ ಸ್ವಲ್ಪ ಜಾಸ್ತಿ ಸಜಾ ಕೊಟ್ಟಿದ್ದೇವೆ. ಆದರೆ ತಮಗೆ ಗೊತ್ತಿದೆ, ಪ್ರಾಸಿಕ್ಯೂಶನ್ ಎಂದರೆ ಕೋರ್ಟಿಗೆ ಹೋಗಿ ಬಿಡುತ್ತಾರೆ. ಕೋರ್ಟಿನಲ್ಲಿ ಪ್ರಾಸಿಕ್ಯೂಶನ್ ಯಾರು ಮಾಡುತ್ತಾರೆ, ಅವರು ಪ್ರೂವ್ ಮಾಡ ಬೇಕಾಗುತ್ತದೆ. ನಂತರ ಕೋರ್ಟಿನ ತೀರ್ಮಾನ ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ. ಇನ್ನೂ ಹೆಚ್ಚಿನ ಶಿಕ್ಷೆ ಕೊಟ್ಟರೂ ಕೂಡ ಅಲ್ಲಿ ಪ್ರೂವ್ ಮಾಡಬೇಕಾದ ಜವಾಬ್ದಾರಿ ಯಾರು ಪ್ರಾಸಿಕ್ಯೂಶನ್ ಮಾಡು ತ್ತಾರೋ ಅವರ ಮೇಲೆ ಇದೆ. ಈ ಸಂದರ್ಭದಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೆ. ದಯವಿಟ್ಟು ಇದನ್ನು ಒಪ್ಪಿಕೊಳ್ಳಬೇಕು. ನಾನು ಕ್ಲಾಸ್ ಬೈ ಕ್ಲಾಸ್ ಬೇಕಾದರೆ ವಿವರಣೆ ಮಾಡುತ್ತೇನೆ. ಅಧ್ಯಕ್ಷರೇ, ಅಮೆಂಡ್‌ಮೆಂಟ್ ಸೆಕ್ಷನ್ 2ಕ್ಕೆ--ಕೋ-ಆಪರೇಟಿವ್ ಇಯರ್ ಯಾವ್ಯಾವುದೆಂದು ಫಿಕ್ಸ್ ಮಾಡಿದ್ದೇವೆ. ಬುಲ್ಕೆ ಮೊದಲನೇ ತಾರೀಕಿನಿಂದ ಜೂನ್ ಮೂವತ್ತರನೆರೆಗೆ ಮತ್ತು ಅಮೆಂಡ್‌ಮೆಂಟ್ ಸೆಕ್ಷನ್ 12--ಇದನ್ನು ಮಾಡಿದಂಥ ಉದ್ದೇಶವನ್ನು ತಮಗೆ ಹೇಳಬೇಕು. ನಾವು ಅಧಿಕಾರಕ್ಕೆ ಬಂದಮೇಲೆ ಕೆಲವು ಬ್ಯಾಂಕುಗಳ ಆಡಿಟ್ ರಿಪೋರ್ಟ್ ಮತ್ತು ರಿಸರ್ವ್‌ಬ್ಯಾಂಕಿನ ಆಡಿಟ್ ರಿಪೋರ್ಟ್‌ನ್ನು ನೋಡಿದಾಗ ಹಲವಾರು ಜಿಲ್ಲಾ ಬ್ಯಾಂಕುಗಳಲ್ಲಿ ಪ್ರಮುಖವಾದ ಸಹಕಾರ ಸಂಘಗಳ ಪ್ರತಿನಿಧಿಗಳು ಇಲ್ಲ. ಕಬ್ಬು ಬೆಳೆಯುವ ಸಹಕಾರ ಸಂಘಗಳ ಪ್ರತಿನಿಧಿಗಳನ್ನು ಆಲ್ಲಿ ಹಾಕಬೇ ಇರುವುದರಿಂದ ಇದರ ಚರಿತ್ರೆಯೇ ಹೋಗಿ ಬಿಡುತ್ತದೆ. ಎಂದು ಎಲ್ಲಾ ಜಿಲ್ಲಾ ಬ್ಯಾಂಕುಗಳನ್ನು ಈ ಬಗ್ಗೆ ಪ್ರಾರ್ಥನೆ ಮಾಡಿಕೊಂಡೆವು ದಯವಿಟ್ಟು ಪ್ರತಿಯೊಂದು ತಾಲ್ಲೂಕಿಗೆ ಪ್ರಮುಖ ಕಬ್ಬಿನ ಸಹಕಾರ ಸಂಘಗಳಿಗೆ ಪ್ರಾತಿನಿಧ್ಯ ಕೊಡಲೇಬೇಕೆಂದು ಕೇಳಿ ಕೊಂಡೆವು ಕೆಲವರು ಜನರಲ್ ಬಾಡಿ ಮೀಟಿಂಗ್ ಕರೆದರು ಇನ್ನು ಕೆಲವರು ಜನರಲ್ ಬಾಡಿಮೀಟಿಂಗ್ ಕರೆದ ನಾಟಕ ಮಾಡಿದರು. ಮೂರು ನಾಲ್ಕು ಜನ ಒಪ್ಪಿಕೊಂಡರು. ಇಬ್ಬರು ಬ್ಯಾಂಕ್‌ನವರು ಕೋರ್ಟಿನಿಂದ ಸ್ಟೇ ತೆಗೆದುಕೊಂಡು ಬಂದರು. ರಿಸರ್ವ್‌ಬ್ಯಾಂಕ್ ನಾರ್ಮ್ಸ್ ಏನಿದೆ ಅದನ್ನು ಅನುಸರಿಸಿ ಸೆಕ್ಷನ 12 ತಂದಿದ್ದೇವೆ. ಇದು ಆಂಧ್ರದಲ್ಲಿದೆ, ಮಹಾರಾಷ್ಟ್ರ ಗುಜರಾತ್ ಹಾಗೂ ತಮಿಳುನಾಡಿನಲ್ಲಿ ಇದೆ. ನಾನು ಕೆಲವನ್ನು ತರಿಸಿದ್ದೇನೆ. ಬೇಕಾದರೆ ಅದನ್ನು ಸದಸ್ಯರ ಅನುಗಾಹನೆಗಾಗಿ ಕಳಿಸಿ ಕೊಡುವುದಕ್ಕೆ ತಯಾರಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ್ --ರಿಜಿಸ್ಟ್ರಾರರ ಡೈರೆಕ್ಷನ್ಸ್ ಅಂತ ತಾವು ಏನು ಹೇಳಿದ್ದೀರಿ....

They have said here that ;

"(5) If it appears to the Registrar that any amendment of the bye-laws of a co-operative society is necessary or or desirable in the interest of such society, the Registrar may, by order, call upon the co-operative society, to make the amendment proposed by him in such manner as may be prescribed and within such time as he may specify."

ಈ ಬಗ್ಗೆ ನಾನು ಹೇಳುವುದೇನೆಂದರೆ, ಸೊಸೈಟಿಯಲ್ಲಿ ಪೂರ್ಣ ಸಾರ್ವಭೌಮತ್ವ ಜನರಲ್ ಬಾಡಿ ಮೀಟಿಂಗ್‌ಗೆ ಇದೆ. ಹೀಗೇ ಮಾಡಬೇಕು, ಇಷ್ಟೇ ಕಾಲದಲ್ಲಿ ಮಾಡಬೇಕು ಅಂತ ತಾವೇನಾದರೂ ರಿಜಿಸ್ಟ್ರಾರ್‌ಗೆ ಡೈರಕ್ಷನ್ ಕೊಟ್ಟಿದ್ದೀರಾ, ಇದರ ಉದ್ದೇಶ ಏನು ? ಅದು ಹೇಳಬೇಕು, ಸಹಕಾರ ಸಂಘದ ಜನರಲ್ ಬಾಡಿ ಮೀಟಿಂಗ್‌ನಲ್ಲಿ ತಾವು ಹೇಳಿದಂಥಾ ನಿರ್ಣಯಗಳನ್ನು ತೆಗೆದುಕೊಳ್ಳತಕ್ಕಂಥಾ ರೀತಿಯಲ್ಲಿ ಈ ಬಿಲ್ ಇದೆಯೇ ? ಒಂದು ವೇಳೆ ಆ ರೀತಿ ಏನಾದರೂ ಒಂದು ತೀರ್ಮಾನ ತೆಗೆದು ಕೊಂಡರೆ ಮುಂದೆ ಕೆಲವು ತೊಂದರೆಗಳೂ ಬರಬಹುದು, ಅದನ್ನು ತಾವು ಯೋಚನೆ ಮಾಡಿದ್ದೀರಾ ?

ಶ್ರೀ ಆರ್ ಎಲ್ ಜಾಲಪ್ಪ --ತಮಗೆ ಹೇಳಬೇಕಾದರೆ ಕರ್ನಾಟಕ ರಾಜ್ಯ ಕೋ ಆಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್ ಇದೆ. ಈ ಫೆಡರೇಷನ್‌ಗೆ ಪ್ರತಿಯೊಂದು ಜಿಲ್ಲೆಯ ಟಿ. ಎ. ಪಿ. ಸಿ. ಎಂ. ಸೊಸೈಟಿಯಿಂದ ಒಬ್ಬೊಬ್ಬರು ರೆಪ್ರೆಸೆಂಟಿಟೀವ್ ಇರಬೇಕು ಅಂತ ಇದೆ.

ಶ್ರೀ ಕೆ. ಎಚ್. ರಂಗನಾಥ್.--ಇದರಲ್ಲಿ ಬಾಳೆಕಾಯಿ ಸೊಸೈಟಿಯವರೂ ಬಂದಿದ್ದಾರೆ.

ಶ್ರೀ ಆರ್ ಎಲ್ ಜಾಲಪ್ಪ.--ಅಷ್ಟೇ ಅಲ್ಲ, ಹಣ್ಣು, ತರಕಾರಿ ಇವಕ್ಕೆಲ್ಲಾ ಒಂದೊಂದು ಸೊಸೆ ಟಿ ಮಾಡಿಕೊಂಡು ಅಲ್ಲಿಯ ರೆಪ್ರೆಸೆಂಟಿಟೀವ್ ಸಹ ಒಬ್ಬೊಬ್ಬರು ಈ ಮಾರ್ಕೆಟಿಂಗ್ ಫೆಡರೇಷನ್ ನಲ್ಲಿ ಬಂದು ಕುಳಿತಿದ್ದಾರೆ.

ಶ್ರೀ ಎಂ. ಮಹದೇವ್.-- ಈಗ ಎಷ್ಟೋ ಸೊಸೈಟಿಗಳು ಡಿಫಾಲ್ಟ್ ಆಗಿವೆ. ಆದುದರಿಂದ ಅವರು ಪ್ರತಿಯೊಂದಕ್ಕೂ ಹೊಸ ಸೊಸೈಟಿಗಳನ್ನು ಮಾಡಿಕೊಂಡಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ --ನನಗೂ ಗೊತ್ತು ಈಗ ಕಬ್ಬು ಬೆಳಿಗಾರರ ಸಂಘ ಎಂದು ಮಾಡಿ ಕೊಂಡಿದ್ದಾರೆ. ಅಲ್ಲಿ ಪ್ರಾಥಮಿಕ ಸೊಸೈಟಿ ಏನು ಇವೆ ಅದರ ರೆಪ್ರೆಸೆಂಟಿಟೀವ್ ಬರುವುದು ಬಿಟ್ಟು, ಆಲ್ಲಿಯ ಕಬ್ಬು ಬೆಳಿಗಾರರೇ ಬಂದು ಇಲ್ಲಿ ಕುಳಿತಿದ್ದಾರೆ

ಶ್ರೀ ಕೆ ಹೆಚ್. ರಂಗನಾಥ್ --ನಿಮ್ಮ ಉದ್ದೇಶ ಸರಿ ಇದೆ, ನಾನು ಒಪ್ಪುತ್ತೇನೆ.

But, this power is too arbitrary. You say, here, in Section which is as follows --

"(5)--the Registrar may, by order, call upon the co-operative society, to make the amendment proposed by him in such manner as may be prescribed and within such time as he may specify."

ಇದರ ಬಗ್ಗೆ ಅಧಿಕಾರದ ವ್ಯಾಪ್ತಿ ಬಹಳ ದೂರ ಇದೆ, ಯಾವ ಉದ್ದೇಶದಿಂದ ಈ ರೀತಿ ಮಾಡಿದ್ದೀರಾ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.--ತಾವು ಮೊದಲೇ ಹೇಳಿದರಲ್ಲಾ, ಇದರಲ್ಲಿ ಬಾಳೆಕಾಯಿ ಸೊಸೈಟಿ ಯವರೂ ಕೂಡ ಇದಾರೆ ಎಂದು, ಅದನ್ನು ತಪ್ಪಿಸುವ ಉದ್ದೇಶದಿಂದ ಮಾಡಿದ್ದೇನೇ ವಿನಾ ಬೇರೆ ಇನ್ನಾವ ಉದ್ದೇಶವೂ ಇಲ್ಲ, ತಮಗೆ ಹೇಳಬೇಕಾದರೆ, ಈ ಬಗ್ಗೆ ತಮಿಳ್‌ನಾಡಿನಲ್ಲಿ ಸೆಕ್ಷನ್ 12 ಇದೆ, ಆಂಧ್ರದಲ್ಲಿ ಸೆಕ್ಷನ್ 14 ಇದೆ, ಮಹಾರಾಷ್ಟ್ರದಲ್ಲಿ ಸೆಕ್ಷನ್ 14 ಇದೆ. ಆ ಪ್ರಾವಿಷನ್ ಅನ್ನು ಇದರಲ್ಲಿ ಅಳವಡಿಸಿದ್ದೇವೆ

ಶ್ರೀ ಕೆ ಎಚ್. ರಂಗನಾಥ್.--ಮುಂದೆ ಮಂತ್ರಿ ಯಾರೋ ಬರಬಹುದು ರಿಜಸ್ಟ್ರಾರ್ ಯಾರೋ ಬರಬಹುದು.

ಶ್ರೀ ಆರ್. ಎಲ್. ಜಾಲಪ್ಪ.--ಆ ರೀತಿಯಾಗಿ ಯದ್ವಾ ತದ್ವಾ ಆಗಬಾರದು ಅಂತಲೇ ಈ ಅಮೆಂಡ್‌ಮೆಂಟ್ ತಂದಿದ್ದೇನೆ ಏನಾದರೂ ಅವಶ್ಯ ಇದ್ದರೆ ಮಾತ್ರ ಏನಾದರೂ ಬದಲಾವಣೆ ಬರಬಹುದು ಇಲ್ಲದೇ ಹೋದರೆ ಅವಕಾಶವೇ ಇರುವುದಿಲ್ಲ.

SRI H. D. CHOWDAIAH --In Amendment of section 2, relaxation is there. That you have not explained. Why ?

ಶ್ರೀ ಆರ್. ಎಲ್ ಜಾಲಪ್ಪ.--ತಮಗೆ ಹೇಳಬೇಕಾದರೆ 8-10 ಸೊಸೈಟಿಯವರು ನವಂಬರ್‌ಗೆ ಎಲೆಕ್ಷನ್ ಇಟ್ಟುಕೊಂಡಿದಾರೆ. ಆದೂ ಕೂಡ ರಿಜಿಸ್ಟ್ರಾರ್ ಅವರ ಪರ್ಮಿಷನ್ ತೆಗೆದುಕೊಂಡು ಇಟ್ಟುಕೊಂಡಿದಾರೆ. ಅವರ ಕ್ಲೋಸಿಂಗ್ ಯಿಯರ್ ನವಂಬರ್‌ಗೆ ಇರುವುದರಿಂದ ಆ ರೀತಿ ಅವರು ಇಟ್ಟುಕೊಂಡಿದ್ದಾರೆ.

SRI M VEERAPPA MOILY.--Sir, this Amendment of Section 12 is a sort of daemed provision. I think, sub-clause (6) of amendment 12 is absolutely arbitrary

SRI R. L. JALAPPA.--We have said here that.--

"---not with standing anything contained in the Act, the Registrar may, after giving the co-operative society an opportunity of being heard register the said amendment-- An opportunity is being given to them.

ಶ್ರೀ ಕೆ. ಹೆಚ್. ರಂಗನಾಥ್.--ಅದರ ಬಗ್ಗೆ ಕ್ಲಾಸ್ ಬೈ ಕ್ಲಾಸ್ ಬಂದಾಗ ಹೇಳುತ್ತೇನೆ. ಈಗ ತಂದಿರುವ ಬಿಲ್‌ನಲ್ಲಿ ಅನಾಮಲೀಸ್ ಇರತಕ್ಕಂಥಾದ್ದು ಬಹಳ ಸೆಕ್ಷನ್ಸ್ ಇವೆ. ಕೆಲವು ಸೆಕ್ಷನ್‌ನಲ್ಲಿ ಜಾರೋಯರ್ಸ್ ಅಂತ ಕೊಟ್ಟಿದ್ದೀರಿ, ಇನ್ನು ಕೆಲವು ಸೆಕ್ಷನ್‌ನಲ್ಲಿ ಷೂರಿಟಿ ಇರುವುದನ್ನು ಕೈಬಿಟ್ಟಿದ್ದೀರಿ. ಇದಕ್ಕೆ ಕಾರಣ ಏನು ? ಇದರಲ್ಲಿ ಕ್ಲಾಸ್ 6 ಮತ್ತು 23 (ಎ) ಹೊಸದಾಗಿ ಹಾಕಿದ್ದೀರಿ, ಇನ್ನೊಂದು ರಿಸರ್ವೇಷನ್‌ನಲ್ಲಿ ಒಬ್ಬರೇ ವುಮೆನ್ ಆಗಿದ್ದರೆ ಸಾಕು ಅನ್ನುವುದು ಮಾತ್ರ ಇದೆ. ಬಾಕಿಯವರು ಇಲ್ಲಗೇ ಇದ್ದರೂ ಇಲ್ಲ ಅಂತ ಹೇಳಿದ್ದೀರಿ ಈ ರೀತಿಯಾಗಿ ಅನೇಕ ಅನಾಮಲೀಸ್ ಈ ಮಸೂದೆಯಲ್ಲಿ ಇದೆ ಮತ್ತು ಇಲ್ಲಿ ತಾವು ಆಫೀಸರ್ಸ್ ಅಂತ ಹೇಳಿದ್ದೀರಿ. ಯಾವ ಕಾರಣದಿಂದ ಇದರಲ್ಲಿ ಆಫೀಸರ್ಸ್ ಅನ್ನುವ ಪದ ಹಾಕಿದ್ದೀರಿ ಅನ್ನುವುದನ್ನು ಹೇಳಬೇಕು. ನಾವು ಪದಾಧಿಕಾರಿಗಳು ಅನ್ನುವ ಪದವನ್ನು ಬಳಸುತ್ತಿದ್ದೆವು; ಅಥವಾ ಆಫೀಸ್ ಬೇರರ್ಸ್ ಅಂತ ಹೇಳುತ್ತಿದ್ದೆವು. ಮತ್ತು ಇದರಲ್ಲಿ 29 (ಸಿ) ಇದ್ದುದನ್ನು ಬಿಡಬೇಕು ಎಂದು ಹೇಳಿದ್ದೀರಲ್ಲಾ, ಇದರ ಬಗ್ಗೆ ಸರ್ಕಾರದ ಉದ್ದೇಶ ಏನು? ಇನ್ನು ಡಿಸ್‌ಕ್ವಾಲಿಫಿಕೇಷನ್ ಬಗ್ಗೆಯೂ ಕೂಡ ಒಂದು ದೋಷ ಇದೆ. ಹೀಗೆ ಈ ಮಸೂದೆಯಲ್ಲಿ ಬೇಕಾದಷ್ಟು ಅನಾಮಲೀಸ್ ಇದೆ. ಮತ್ತು 29 (ಸಿ)ಗೂ ಮತ್ತು 23 (ಎ)ಗೂ ತಾರತಮ್ಯ ಇದೆ, ಇದು ಬಹಳ ಮುಖ್ಯವಾದುದು, ಇದನ್ನು ಛೇಂಜಸ್ ಮಾಡಬೇಕಾಗುತ್ತದೆ. ಹೀಗೆ ಹೇಳುತ್ತಾ ಹೋದರೆ ಬೇಕಾದಷ್ಟು ಇದೆ.

ಶ್ರೀ ಆರ್. ಎಲ್. ಜಾಲಪ್ಪ.--ತಾವು ಇದರ ಬಗ್ಗೆ ಕ್ಲಾಸ್ ಬೈ ಕ್ಲಾಸ್ ಬಂದಾಗ ವಿವರಣೆಗಳನ್ನು ಕೊಡಿ. ನಾನು ಈ ಅಮೆಂಡ್‌ಮೆಂಟ್ ಸೆಕ್ಷನ್‌ನಲ್ಲಿ (2) ಏನು ಇದೆ ಅದನ್ನು ಹೇಳಿದ್ದೇನೆ. ನಾವು ಯಾವುದನ್ನೂ ಬಿಟ್ಟಿಲ್ಲ ಬೇರೆ ಬೇರೆ ಎಕ್ಸೆಪ್ಷನ್ ಕೊಟ್ಟಿದ್ದೇವೆ. ತಮಗೆ ಹೇಳಬೇಕಾದರೆ, ಬಾಂಬೆ ಕರ್ನಾಟಕದ ಏರಿಯಾದಲ್ಲಿರತಕ್ಕಂಥಾವರು ಕೆಲವು ಸೊಸೈಟಿಗಳ ಅಕೌಂಟಿಂಗ್ ಯಿಯರ್ ಅನ್ನು ನವಂಬರ್ ಅಂತ ಇಟ್ಟುಕೊಂಡಿದ್ದಾರು.

ಶ್ರೀ ಹೆಚ್. ಡಿ. ಚೌಡಯ್ಯ.--ಆ ಸೊಸೈಟಿಗಳ ಹೆಸರು ಹೇಳುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.--ಈಗ ನನ್ನ ಹತ್ತಿರ ಆ ವಿವರಗಳು ಇಲ್ಲ. ತಮಗೆ ಉದಾಹರಣೆ ಹೇಳಬೇಕಾದರೆ, ಈ ಷುಗರ್ ಫ್ಯಾಕ್ಟರಿಯವರು ಅವರ ಅಕೌಂಟಿಂಗ್ ಯಿಯರ್ ನವಂಬರ್ ಆಗಿರುವುದರಿಂದ ಅವರು ನವಂಬರ್‌ನಲ್ಲಿ ಜನರಲ್ ಬಾಡಿ ಮೀಟಿಂಗ್ ಇಟ್ಟುಕೊಳ್ಳಲು ರಿಜಿಸ್ಟ್ರಾರ್ ಅವರಿಂದ ಪರ್ಮಿಷನ್ ತೆಗೆದುಕೊಂಡಿದ್ದಾರೆ.

ಶ್ರೀ ಹೆಚ್. ಡಿ. ಚೌಡಯ್ಯ.--ಸ್ವಾಮಿ, ಈ ಸಹಕಾರ ಕ್ಷೇತ್ರ ಬಹಳ ವರ್ಷಗಳಿಂದಲೂ ನಡೆದುಕೊಂಡು ಬಂದಿದೆ ಅನ್ನುವುದು ತಮಗೆ ಗೊತ್ತು. ನೀವು ಈಗ ಇದರ ಬಗ್ಗೆ ಪ್ರಯೋಗ ಮಾಡುವುದಕ್ಕೆ ಹೊರಟಿದ್ದೀರಿ ಈಗಾಗಲೇ ಅನೇಕ ಪ್ರಯೋಗಗಳು ಆಗಿವೆ. 1956 ರಲ್ಲೇ ರಾಜ್ಯವಿಲೀನವಾಗಿದ್ದರೂ ಕೂಡ ಇದುವರೆಗೆ ನಾಲ್ಕಾರು ಸಲ ಇದರ ಬಗ್ಗೆ ಅಮೆಂಡ್‌ಮೆಂಟ್ ಆಗಿದೆ ಈಗಲೂ ಸಹ ಅದನ್ನೇ ಮುಂದುವರೆಸಿಕೊಂಡು ಹೋಗುತ್ತಿದ್ದೀರಿ ಇದರ ಬಗ್ಗೆ ಅಡ್ಮಿನಿಸ್ಟ್ರೇಟೀವ್ ಡಿಸ್‌ಪ್ಲಿನ್ ಬರಬೇಕು. ಫೈನಾನ್ಷಿಯಲ್ ಡಿಸ್‌ಪ್ಲಿನ್ ಬರಬೇಕು ಅನ್ನುವುದನ್ನು ನಾನು ಒಪ್ಪುತ್ತೇನೆ. 1984ರಲ್ಲಿ ಈ ಅಮೆಂಡ್‌ಮೆಂಟ್ ತರತಕ್ಕಂಥಾ ಕಾಲದಲ್ಲಾದರೂ ಆ ರೀತಿ ಮಾಡಿ. ಕೆಲವರು ಅಕೌಂಟಿಂಗ್ ಯಿಯರ್ ಅನ್ನು ನವಂಬರ್ ಟು ಡಿಸೆಂಬರ್‌ವರೆಗೆ ಏನು ಇಟ್ಟುಕೊಂಡಿದಾರಲ್ಲಾ ಅವರಿಗೇಕೆ ರಿಲ್ಯಾಕ್ಸೇಷನ್ ಕೊಡಬೇಕು, ಎಲ್ಲರಿಗೂ ಒಂದೇ ರೀತಿ ಇರಲಿ, ಅವರಿಗೆ ಆರೀತಿಯಾಗಿ ಪರ್ಮಿಷನ್ ಕೊಡುವುದು ಬೇಡ.

ಶ್ರೀ ಆರ್. ಎಲ್. ಜಾಲಪ್ಪ --ಷುಗರ್ ಫ್ಯಾಕ್ಟರಿಯವರು ತಮ್ಮ ಕನ್‌ವೀನಿಯನ್ಸ್‌ಗೆ ಅದನ್ನು ಇಟ್ಟುಕೊಂಡಿದ್ದಾರೆ. ಅವರಿಗೆ ಆರೀತಿಯಾಗಿ ಪರ್ಮಿಷನ್ ಕೊಡುವುದು ಬೇಡ ಅನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ ಚೌಡಯ್ಯ.--ಸ್ವಾಮಿ, ತನುಗೆಲ್ಲಾ ಇದರ ಬಗ್ಗೆ ವಿಷಯ ಗೊತ್ತಿದೆ. ತಾವು ಎಸ್. ಎಲ್. ಡಿ. ಬ್ಯಾಂಕ್‌ನಲ್ಲಿ ಇದ್ದೀರಿ, ನಿಮಗೆ ಬೇಕಾದಷ್ಟು ಇದರಲ್ಲಿ ಅನುಭವ ಇದೆ. ಎಸ್. ಎಲ್. ಡಿ. ಬ್ಯಾಂಕ್‌ಗಳು ಏನು ಇತ್ತು ಅವು ಕ್ಯಾಷ್ ಬುಕ್ ಅನ್ನೇ ಇಟ್ಟುಕೊಂಡು ಕೆಲಸ ಮಾಡುತ್ತಿರಲಿಲ್ಲ, ಅದೇ ರೀತಿ ನಡೆದುಕೊಂಡು ಬಂದಿದೆ, ಹೌದು ಅಲ್ಲವೋ ಹೇಳಿ ಸ್ವಾಮಿ ? ಆದುದರಿಂದ ನಾನು ಹೇಳುವುದೇನೆಂದರೆ **Sir, there must be one-Co-operative year for the entire State and no two.**

ಶ್ರೀ ಆರ್. ಎಲ್. ಜಾಲಪ್ಪ --ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆಮೇಲೆ ಈ ಸೆಕ್ಷನ್ 12 ರ ಬಗ್ಗೆ ನಾನು ಹೇಳಿದೆ. ಅದನ್ನು ಎಕ್ಸ್‌ಪ್ಲೈನ್ ಮಾಡುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.--ಕೃಷಿಂಗ್ ಸೀಸನ್ ಇರಲಿ, ಏನಾದರೂ ಇರಲಿ, ಜೂನ್ 30ಕ್ಕೆ ಅಕೌಂಟ್ ಕ್ಲೋಸ್ ಮಾಡಬೇಕೆಂದು ಹೇಳಿ ಅಮೆಂಡ್ ಮಾಡುತ್ತೇನೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ.--ಅಧ್ಯಕ್ಷರೇ, ಒಂದೊಂದೇ ಒಪ್ಪಿಕೊಳ್ಳುತ್ತಾ ಹೋದರೆ ಹೇಗೆ ? ಈ ವಿಷಯಗಳನ್ನು ನಾವು ಚರ್ಚೆಗೆ ತೆಗೆದುಕೊಂಡು ಚರ್ಚೆ ಮಾಡುವುದಿದೆ. ಏತಕ್ಕಾಗಿ ಹೇಳುತ್ತೇನೆ ಎಂದರೆ, ಈಗ ತಂದಿರುವಂಥ ಕ್ಲಾಸ್ ಕೆಲವು ಸೊಸೈಟಿಗಳಿಗೆ ಅಗತ್ಯವಾಗುತ್ತದೆ. ಎಲ್ಲಾ ಸೊಸೈಟಿಗಳಿಗೂ ಆಕೌಂಟ್ ಎಂಡಿಂಗ್ ಜೂನ್ ಮಾಡುವುದಕ್ಕೆ ಬರುವುದಿಲ್ಲ. ನವೆಂಬರ್‌ಗೆ ನಮ್ಮ ಅಡಿಕೆ ಸೊಸೈಟಿಗಳಲ್ಲಿ ಸ್ಟಾಕ್ ಉಳಿಯುತ್ತದೆ. ಆದುದರಿಂದ ಜೂನ್‌ನಲ್ಲಿ ಮೀಟಿಂಗ್ ಮಾಡುವುದಕ್ಕೆ ಸಾಧ್ಯವಿಲ್ಲ. ಮಂತ್ರಿಗಳು ಏನು ಹೇಳಿದ್ದಾರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿದೆ. ಒಂದಕ್ಕೇ ಒಪ್ಪಿಕೊಂಡು ಚರ್ಚೆ ಮುಗಿಸಿದರೆ ಹೇಗೆ ?

ಶ್ರೀ ಎಲ್. ಟಿ ತಿಮ್ಮಪ್ಪ ಹೆಗ್ಗಡೆ.--ನಾನು ಹೇಳುವುದು, ಕೆಲವು ಸೊಸೈಟಿಗಳು ಇವೆ. ಈಗ ಅಡಿಕೆ ಸೊಸೈಟಿಗಳು ನಮ್ಮ ಕಡೆ ಇವೆ. ಇವುಗಳಲ್ಲಿ ನವೆಂಬರ್‌ನಲ್ಲಿ ಅರ್ಧಕ್ಕಿಂತ ಹೆಚ್ಚು ಅಂದರೆ, ಮುಕ್ಕಾಲುವಾಸಿ ಸ್ಟಾಕ್ ಉಳಿಯುತ್ತದೆ. ಅದಕ್ಕೋಸ್ಕರ ಈ ಸೊಸೈಟಿಗಳಿಗೆ ಆಕೌಂಟ್ ಎಂಡಿಂಗ್ ಅಕ್ಟೋಬರ್‌ನಲ್ಲಿ ಇಡಬೇಕು ಎಂದು ಹೇಳಿದ್ದಾರೆ. ಅದಕ್ಕೋಸ್ಕರವೇ ಇದನ್ನು ತಂದಿದ್ದಾರೆ ಅದು ಗೊತ್ತಿಲ್ಲದೆ, ವಿಮರ್ಶೆ ಮಾಡದೆ, ಹಾಗೇ ಒಪ್ಪಿಕೊಂಡು ಬಿಟ್ಟರೆ ಹೇಗಾಗುತ್ತದೆ. ಇದರ ಬಗ್ಗೆ ಚರ್ಚೆ ಮಾಡೋಣ, ವಿವರವಾಗಿ, ಸಮಗ್ರವಾಗಿ ಚರ್ಚೆ ಮಾಡದೆ ಅದನ್ನು ಒಪ್ಪಕೂಡದು ಎಂದು ಹೇಳುತ್ತೇನೆ. ನಾವು ಈಗ ಇಟ್ಟಿರುವುದು ಸರಿ ಇದೆ. ಮಾನ್ಯ ಚೌಡಯ್ಯನವರು ಹೇಳಿದ ಕೂಡಲೇ ಒಪ್ಪಿಕೊಂಡು ಬಿಟ್ಟರೆ ಹೇಗೆ ?

ಶ್ರೀ ಆರ್. ಎಲ್. ಜಾಲಪ್ಪ.--ಏನಾದರೂ ಆಗಲೀ ಆಕೌಂಟ್ ಎಂಡಿಂಗನ್ನು ಜೂನ್ 30ಕ್ಕೆ ಕ್ಲೋಸ್ ಮಾಡಬೇಕು. ಇದನ್ನು ಸೆಕ್ಷನ್ 12 ರಲ್ಲಿ ಈಗಾಗಲೇ ಇದರ ಬಗ್ಗೆ ತೋರಿಸಿದ್ದೇನೆ. ಇದನ್ನು ನೋಡಬಹುದು ಮತ್ತೆ ಸೆಕ್ಷನ್ 20ರಲ್ಲಿ ಸುಸ್ತಿ ಬಿಟ್ಟದ್ದೇವೆಂದು ಹೇಳಿದುದು ತಮಗೆ ಗೊತ್ತಿದೆ. ಈಗ ಜಾಮೀನುದಾರರನ್ನು ಸುಸ್ತಿದಾರರು ಎಂದು ಡಿಕ್ಲೇರ್ ಮಾಡುವುದು ಬೇಡ. ಏಕೆಂದರೆ ಯಾರೂ ಜಾಮೀನುದಾರರಾಗಲು ಮುಂದೆ ಬರುವುದಿಲ್ಲ ಆದರೆ ಹಣದ ವಸೂಲಾತಿಗೆ ಅವರ ಜವಾಬ್ದಾರಿ ಇದೆ. ಓಟಿಂಗ್ ಪರ್‌ಪಸ್‌ಗೆ ಮಾತ್ರ ಸುಸ್ತಿದಾರರು ಎಂದು ಹೇಳಿದ್ದೇವೆ.

ಶ್ರೀ ಎಚ್. ಡಿ ಚೌಡಯ್ಯ.—ಹತ್ತಾರು ವರ್ಷಗಳಿಂದ ನಡೆದ ದೊಡ್ಡ ಆಂದೋಲನ ಇದು. ಸ್ಯೂರಿಟಿಯನ್ನು ಜಪ್ತಿ ಮಾಡುತ್ತಿದ್ದಾರೆ. ಇಲ್ಲಿ **Borrower must be responsible not surety** ಎಂದು ಮಾಡಬೇಕು.

ಶ್ರೀ ಆರ್. ಎಲ್ ಜಾಲಪ್ಪ.--ಆದನ್ನು ತೆಗೆದರೆ ವಸೂಲಿ ಬಹಳ ಕಷ್ಟವಾಗುತ್ತದೆ. ಅವರು ಓಟ್ ಗಷ್ಟೇ ಜವಾಬ್ದಾರಿಯಿಂದ ಇರುತ್ತಾರೆ. ಸುಸ್ತಿದಾರರು ಓಟು ಮಾಡುವ ಡೈರೆಕ್ಟರ್ ಒಬ್ಬರು ಇದ್ದರು. ಅವರು ಎಷ್ಟು ಜವಾಬ್ದಾರಿಯಿಂದ ಕೆಲಸ ಮಾಡುತ್ತಾರೆ ? ಸಾಲ ಮಾಡಿರುವವರು ಸುಸ್ತಿದಾರರು, ಗ್ಯಾರಂಟರ ಪ್ರದೇಶಗಳಲ್ಲಿ ಸ್ಯೂರಿಟಿ ಹಾಕುವುದಕ್ಕೆ ಯಾರು ಮುಂದೆ ಬರುವುದಿಲ್ಲ. ಇದು ಎಂಟು ಹತ್ತು ವರ್ಷಗಳ ಡಿಮ್ಯಾಂಡ್ ಆದುದರಿಂದ ಇದನ್ನು ತಂದಿದ್ದೇವೆ. **for the purpose of voting only he is not defaulter.**----ಆಮೇಲೆ ಒಂದು 50 ಪರ್ಸೆಂಟ್ ವಸೂಲು ಮಾಡಿ ಅದನ್ನು ಬಾರೋಯಿಂಗ್ ಇನ್‌ಸ್ಟಿಟ್ಯೂಷನ್‌ಗೆ ಪಾಸ್ ಮಾಡಿದ್ದಾರೆ. ಮೊದಲು ಪಾಸ್ ಮಾಡಬೇಕೆಂದು ಇರಲಿಲ್ಲ. 50 ಪರ್ಸೆಂಟ್ ವಸೂಲು ಮಾಡಿದರೆ ಓಟಿಂಗ್‌ಗೆ ಪವರ್ ಇತ್ತು. ಕಂಟಿನ್ಯಿಂಗೆಗೆ ಪವರ್ ಇರಲಿಲ್ಲ ಇದರಿಂದ ಏನಾಯಿತು ಎಂದರೆ ಬಹಳಷ್ಟು ಜಿಲ್ಲಾ ಬ್ಯಾಂಕುಗಳಿಂದ ರೆಪ್ರೆಸೆಂಟೇಷನ್ ಇರಲಿಲ್ಲ ಒಂದು ಕಡೆಯಿಂದಲೂ ಅಗ್ರಿಕಲ್ಚರಲ್ ಸೊಸೈಟಿಗಳಿಂದ ಸೆಪ್ರೆಸೆಂಟೇಷನ್ ಇರಲಿಲ್ಲ. ಮೈಸೂರಿನಲ್ಲಿ ನಾಲ್ಕೈದು ಜೇರೆ ಸಹಕಾರ ಸಂಘಗಳಿಂದ ಬಂದಿದ್ದಾರೆ, ವಿಜಾಪುರದಲ್ಲಿ ಇದೇ ರೀತಿ ಬಂದಿದ್ದಾರೆ. ಆದಕ್ಕೆ ನಾವು ಈ ಯೋಚನೆ ಮಾಡಿದ್ದೇವೆ ಕೋ-ಆಪರೇಟೀವ್ ಇಯರ್ ಎಂಡಿಂಗ್ ಆದ 15 ದಿವಸದೊಳಗೆ ಅವರಿಗೆ ಓಟಿಂಗ್ ಪವರ್ ಮತ್ತು ಕಂಟಿನ್ಯಿಂಗ್ ಪವರ್ ಎರಡನ್ನೂ ಕೊಡಬೇಕೆಂದು ಇದನ್ನು ತಂದಿದ್ದೇವೆ.

ಆಮೇಲೆ 23-ಎ :-4-5 ವರ್ಷಗಳಿಂದ ಒಂದು ಡಿಮ್ಯಾಂಡ್ ಇತ್ತು. ವ್ಯವಸಾಯಗಾರರು ಸಾಲ ಮಾಡಿ ವಾಪಸ್ ಕೊಡುವಾಗ ಷೇರು ಹಣವನ್ನು ವಾಪಸು ಕೊಡುವುದಿಲ್ಲ ಎಂದು ಹೇಳಿ. ಷೇರು ಹಣವನ್ನು ವಿಥ್‌ಹೆಲ್ಡ್ ಮಾಡುತ್ತಿದ್ದರು. ಷೇರು ಹಣ ಎಷ್ಟು ಬೇಕೋ ಅಷ್ಟು ಉಳಿಸಿಕೊಂಡು ವಾಪಸ್ ಕೊಡುತ್ತಿದ್ದರು. ಷೇರಿನ ಮೇಲೆ ಒಂದಕ್ಕೆ ನಾಲ್ಕರಷ್ಟು ಬಡ್ಡಿ ಉಳಿಯುತ್ತದೆ. ಹೋದವರ್ಷ ಇದೇ ಸದನದಲ್ಲಿ ಷೇರು ಹಣದ ಮೇಲೆ ಸಾಲ ಕೊಡುವಾಗ ಅಡ್ಜಸ್ಟ್ ಮಾಡುವುದಕ್ಕೆ ಎಕ್ಸಿಕ್ಯುಟೀವ್ ಆರ್ಡರ್ ಹೊರಡಿಸಿದ್ದೆವು. ಅದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಈ ಸೆಕ್ಷನ್ ತಂದಿದ್ದೇವೆ ಅರ್ಬನ್ ಬ್ಯಾಂಕ್ಸ್, ಇಂಡಸ್ಟ್ರಿಯಲ್ ಬ್ಯಾಂಕ್ ಹಾಗೂ ಬೇರೆ ಬ್ಯಾಂಕುಗಳಿಗೆ ಇದರಿಂದ ತೊಂದರೆಯಾಗುತ್ತದೆಂದು ಹೇಳಿದ್ದಾರೆ.

ಅದನ್ನೂ ಕೂಡ ಗಮನದಲ್ಲಿಟ್ಟುಕೊಂಡು ಇಲ್ಲಿ ಚರ್ಚೆ ಮಾಡಬಹುದು ಎಂದು ಮಾನ್ಯ ಸದಸ್ಯರಿಗೆ ನಾನು ಸೂಚಿಸಬಯಸುತ್ತೇನೆ.

ಶ್ರೀ ಹೆಚ್. ಡಿ. ಚೌಡಯ್ಯ.--ಇದರಲ್ಲಿ ಒಂದು ತೊಂದರೆಯಾಗುತ್ತದೆ. ಇದೇನೋ ಬಹಳ ವರ್ಷಗಳಿಂದ ಇರತಕ್ಕ ಬೇಡಿಕೆ. ಇದರ ಬಗ್ಗೆ ತಮ್ಮ ಸೂಚನೆ ಕರೆಕ್ಟಾಗಿದೆ. ಆದರೆ ಒಂದು ತೊಂದರೆ ಬರಬಹುದೆಂದು ಕಾಣುತ್ತದೆ ಯಾವಾಗ ಷೇರ್ ಕ್ಯಾಪಿಟಲ್ ವಾಪಸ್ ಕೊಡುತ್ತೀರಿ ಆಗ ಶೇರು ಪೇಯಡ್ ಆಫ್-ಷೇರು ಕರಗಿ ಹೋಗುತ್ತದೆ. ಇದರಿಂದ ಫೈನಾನ್ಷಿಯಲ್ ಇನ್ಸ್ಟಿಟ್ಯೂಷನ್ಸ್‌ಗೆ ಬಾರೋಯಿಂಗ್ ಪವರ್ ಕಡಿಮೆಯಾಗುತ್ತದೆ. ಬೇರೆ ರೀತಿಯ ಸಾಲ ಮಾಡುವುದಕ್ಕೆ ಅವಕಾಶ ಇರುವುದಿಲ್ಲ. ಅದನ್ನು ತುಂಬುವುದಕ್ಕೆ ಏನಾದರೂ ವ್ಯವಸ್ಥೆ ತಾವು ಮಾಡಬೇಕು.

ಶ್ರೀ ಬಿ. ಭೈರಪ್ಪಾಜಿ.--ಅಡಿಷನಲ್ ಷೇರನ್ನು ಜಾಸ್ತಿ ಮಾಡುವುದು ಸೂಕ್ತ. ಇಲ್ಲದೇ ಹೋದರೆ ಬಡವರಿಗೆ ಎಲ್ಲಿಯೂ ಕೂಡ ಯಾರೂ ಮೂರು ರೂಪಾಯಿಗಳನ್ನೂ ಕೊಡುವುದಿಲ್ಲ. ಪೇಯಡ್-ಆಫ್-ಷೇರಿಗೆ 12-15 ರೂಪಾಯಿಗಳ ಬಡ್ಡಿ ಕೂಡಾ ಆಗುತ್ತದೆ. ಈ ದೃಷ್ಟಿಯಿಂದ ಅಡಿಷನಲ್ ಷೇರನ್ನು ಜಾಸ್ತಿ ಮಾಡುವುದು ಸೂಕ್ತ ಎಂಬುದನ್ನು ನಾನು ಈ ಸಂದರ್ಭದಲ್ಲಿ ಒಪ್ಪುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ --ಆಮೇಲೆ 28-ಎ ಒಂದು ತಂದಿದ್ದೇನೆ. ಇದರಲ್ಲಿ ಬಹಳ ಮುಖ್ಯವಾದುದು ಎಂದರೆ ಯಾವುದೇ ಸಹಕಾರ ಸಂಘ ಆಗಬೇಕಾದರೂ 9 ಜನಕ್ಕೆ ಕಡಿಮೆ ಇಲ್ಲದ ಹಾಗೆ ಮ್ಯಾನೇಜಿಂಗ್ ಕಮಿಟಿ ಇರಬೇಕು. ಮತ್ತು ಎಲ್ಲಿ ವ್ಯಕ್ತಿಗಳು ಷೇರುದಾರರಾಗಿರುತ್ತಾರೋ ಅಂತಹ ಕಡೆ ಒಬ್ಬ ಹರಿಜನ ವ್ಯಕ್ತಿಗೆ, ಒಬ್ಬ ಮಹಿಳೆಗೆ ಸ್ಥಾನವನ್ನು ವಿಾಸಲಾಗಿದಬೇಕೆಂದು ಹೇಳಿದ್ದೇನೆ. ಇದು ಕೆ. ಹೆಚ್. ಪಾಟೀಲರ ಒಂದು ರೆಕಮೆಂಡೇಷನ್‌ನಲ್ಲಿ ಇಲ್ಲ ಫೆಡರಲ್ ಇನ್ಸ್ಟಿಟ್ಯೂಷನ್‌ಗೆ ಕೊಡಬೇಕು ಎಂದು ಇದೆ. ಇದನ್ನು ಯಾವರೀತಿ ಕೊಡಬೇಕೆಂದು ತೀರ್ಮಾನ ಮಾಡಿ ಮುಂದೆ ಕಾಂಪ್ರೊ ಹೆನ್ಸೀವ್ ಬಿಲ್ ತರುತ್ತಿದ್ದೇನೆ ಆದರಲ್ಲಿ ಇದನ್ನು ಸೂಚಿಸುತ್ತೇನೆ. ಅದನ್ನು ಮಾಡುವಾಗ ಮಾನ್ಯ ಚೌಡಯ್ಯನವರು ಹಾಗೂ ಇತರ ಮಿತ್ರರ ಸಲಹೆಯನ್ನು ಪಡೆಯುತ್ತೇನೆಂದು ಹೇಳುತ್ತೇನೆ. ಇಲ್ಲಿ ಮೂರು ವರ್ಷಕ್ಕೊಂದು ಸಾರಿ ಚುನಾವಣೆ ಆಗಬೇಕೆಂದು ಸಲಹೆ ಮಾಡಿದ್ದಾರೆ. ಮತ್ತು ಪ್ರತಿವರ್ಷ ಅಧ್ಯಕ್ಷರ ಚುನಾವಣೆ ಆಗಬೇಕೆಂದು ಅಮೆಂಡ್‌ಮೆಂಟ್ ತಂದಿದ್ದೇನೆ. Full Board once in three years to be elected. President and Vice-President and other office-bearers to be elected every year.

ಶ್ರೀ ಕೆ ಎಸ್. ಕಾಳಮುರೀಗೌಡೆ.—ಮೂರು ವರ್ಷ ಅಂದರೆ ಒಟ್ಟು ಮೂರು ವರ್ಷವೇ ?

ಶ್ರೀ ಆರ್. ಎಲ್. ಜಾಲಪ್ಪ.--ಹೌದು ಒಟ್ಟು ಮೂರು ವರ್ಷ.

ಶ್ರೀ ಕೆ. ಹೆಚ್. ರಂಗನಾಥ್.---ಎರಡು ವರ್ಷ ಆಗಿದ್ದರೆ ಚೆನ್ನಾಗಿತ್ತು. ಮೂರು ವರ್ಷ ಎಂದರೆ ಬಹಳ ಕಷ್ಟ.

ಉಪಾಧ್ಯಕ್ಷರು --ಅವರು ಎಕ್ಸ್‌ಪ್ಲೈನ್ ಮಾಡುತ್ತಿದ್ದಾಗ ಮಧ್ಯೆ ಇಂಟರ್‌ಫಿಯರ್ ಮಾಡುವುದರಿಂದ ತೊಂದರೆಯಾಗುತ್ತದೆ. ಅವರು ಮೊದಲು ಎಕ್ಸ್‌ಪ್ಲೈನ್ ಮಾಡಿಬಿಡಲಿ.

ಶ್ರೀ ಆರ್. ಎಲ್. ಜಾಲಪ್ಪ.---ಇನ್ನೊಂದು ಅಮೆಂಡ್‌ಮೆಂಟ್ ತಂದಿದ್ದೇನೆ. 29-ಸಿ. ಇದರ ಪ್ರಕಾರ ಇಂಡಿವಿಜುಯಲ್ಸ್‌ಗೆ ಅಪ್ಲೈ ಆಗಬೇಕೇ ವಿನಹ ಒಂದು ಸಂಸ್ಥೆಗಲ್ಲ. ಡಿಫಾಲ್ಟರ್ ಆದರೆ 29-ಸಿ ಪ್ರಕಾರ ಒಂದು ಸಂಸ್ಥೆಯನ್ನು ಇನ್ನೊಂದು ಸಂಸ್ಥೆಯಲ್ಲಿ ಡಿಫಾಲ್ಟರ್ ಆದರೆ ತೆಗೆದುಹಾಕುತ್ತಿದ್ದರು. ಅದು ಬೇಡ ಎಂದು ಅಮೆಂಡ್‌ಮೆಂಟ್ ತಂದಿದ್ದೇನೆ ಉದಾಹರಣೆಗೆ ನಿಮ್ಮ ಜಿಲ್ಲೆಯಿಂದ ಒಬ್ಬರು ಮಾರ್ಕೆಟಿಂಗ್ ಫೆಡರೇಷನ್‌ಗೆ ಆಯ್ಕೆಯಾಗಿ ಬರುತ್ತಾರೆ. ಸಬ್‌ಸಿಕ್ವೆಂಟ್ ಆಗಿ ಡಿಫಾಲ್ಟರ್ ಆಗಿದ್ದಾರೆಂದು ಅವರನ್ನು ರಿಮೂವ್ ಮಾಡುತ್ತಾರೆ.

Once he is elected for three years, only for this Federal Institution he will continue inspite of this society being defaulter. If he becomes individual defaulter, he will have to quit.

ಈ ಒಂದು ಕಾರಣದಿಂದ ನನ್ನನ್ನೇ ಮೂರು ಸಲ ತೆಗೆದಿದ್ದರು. ನನಗೆ ಇರುವ ಅನುಭವವನ್ನು ಇದರಲ್ಲಿ ಕ್ರೋಢೀಕರಿಸಿದ್ದೇನೆ. ಬಹಳ ಜನ ಸಹಕಾರಿಗಳು ಈ ಸದನದಲ್ಲಿ ಬಂದಿದ್ದಾರೆ ಬಹಳ ಸಂತೋಷ. ಅವರೆಲ್ಲ ಸೂಕ್ತ ಸಲಹೆ ಕೊಡಬೇಕು. ಸೆಕ್ಷನ್ 29 (ಡಿ) ಗೆ ಬಹಳ ಮುಖ್ಯವಾಗಿ ತಿದ್ದುಪಡಿ ತಂದಿದ್ದೇವೆ. ಹಿಂದಿನ ಕಾನೂನು ಪ್ರಕಾರ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು 6 ವರ್ಷಗಳವರೆಗೆ

ಇರಬೇಕಾಗಿತ್ತು. ಇದರ ಬಗ್ಗೆ ಮಾನ್ಯ ಕೆ. ಎಚ್. ಪಾಟೀಲರ ವರದಿಯಲ್ಲಿಯೂ ಕೂಡ ಇದು ಅನಾವಶ್ಯಕ ಎಂದು ಸೂಚಿಸಿದ್ದರು. ಇದುವರೆಗೆ ಏನು ಮಾಡುತ್ತಿದ್ದರು ಅಂದರೆ 5 ವರ್ಷ 9 ತಿಂಗಳು ಆಗಿರುವಾಗಲೇ ಕಾಜೀನಾಮೆ ಕೊಟ್ಟು ಮತ್ತೆ ಬರುತ್ತಿದ್ದರು. ಇದನ್ನು ತಪ್ಪಿಸಿ if he is there for six years intermittently, he cannot contes for further three years, I have reduced the period from 6 to 3 years This is not given retrospective effect. ಈ ಒಂದು ಕಾನೂನು ಈಗಾಗಲೇ ಜಾರಿಯಲ್ಲಿದೆ.

11-00 a,m.

ಉಪಾಧ್ಯಕ್ಷರು.--ಮಾನ್ಯ ಮಂತ್ರಿಯವರು ವಿವರಣೆ ಕೊಡುತ್ತಿದ್ದಾರೆ. ಯಾರು ಯಾರಿಗೆ ಅನುಮಾನ ಬರುತ್ತೆ, ಅಂತಹವರಿಗೆ ಕೊನೆಯಲ್ಲಿ ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ದಯವಿಟ್ಟು ಸುಧ್ಯೆ ಪ್ರವೇಶ ಮಾಡಬೇಡಿ.

ಶ್ರೀ ಧನಂಜಯ ಕುಮಾರ್.--ಸ್ವಾಮಿ, ನನಗೆ ಇದರಲ್ಲಿ ಒಂದು ಡೌಟ್ ಇದೆ. ಬೇಕಾದಂತ ಅಮೆಂಡ್‌ಮೆಂಟ್ ತಂದಿದ್ದರೂ ಕೂಡ ಎಕ್ಸ್‌ಪ್ಲಂಷನ್ ಕೊಡುವಂಥ ಅಧಿಕಾರವನ್ನು ಇಟ್ಟು ಕೊಂಡಿದ್ದಾರೆ.

ಶ್ರೀ ಆರ್. ಎಲ್ ಜಾಲಪ್ಪ.--ಸ್ವಾಮಿ, 23,000 ಸಹಕಾರ ಸಂಘಗಳಲ್ಲಿ ಒಂದೇ ಒಂದು ಕ್ಯಾನ್ಸೋ ಮಲ್ಟಿ ಇನ್ಸ್‌ಟ್ಯೂಷನ್‌ಗೆ ಕೊಟ್ಟಿದ್ದೇವೆ. ಸೂಪರ್‌ಸಿಡ್ ಮಾಡುವ ಸಂಸ್ಥೆಗಳು ಯಾವುದು ಉಳಿದಿಲ್ಲ. ನಾನ್ ಆಫಿಷಿಯಲ್ ಹಾಕಿದ್ದರೂ ಸುಮಾರು 75 ಭಾಗ ಇಂಪ್ರೂವ್‌ಮೆಂಟ್ ಆಗಿಲ್ಲ. ಎಲೆಕ್ಷನ್ ಮಾಡಿ ನ್ಯೂ ಕಮಿಟಿಗೆ ಒಪ್ಪಿಸಿ ಎಂದು ಹೇಳಲಾಗಿದೆ. He must handover to the new Committee. If that Committee also were to be superseded within a year, then, supersession period will be for 3 years.

ರಿಸರ್ವ ಬ್ಯಾಂಕ್‌ನವರು ಇನ್ಸ್‌ಪೆಕ್ಷನ್ ಕೊಟ್ಟಿದ್ದಾರೆ, ಆದರಂತೆ ಅರ್ಬನ್ ಬ್ಯಾಂಕಿನಲ್ಲಿ ಸದಸ್ಯರಾಗಿದ್ದು ಸೂಪರ್‌ಸೀಡ್ ಆದಮೇಲೆ ಮುಂದಿನ ನಾಲ್ಕು ವರ್ಷಗಳು ಆ ಸಂಸ್ಥೆಯ ಸದಸ್ಯರಾಗಿರಬಾರದು ಎನ್ನುವಂಥ ತಿದ್ದುಪಡಿ ತಂದಿದ್ದೇವೆ.

ಶ್ರೀ ಎಂ. ಮಹದೇವ್.--ಇದು ಪ್ರಜಾಪ್ರಭುತ್ವ ಪದ್ಧತಿಗೆ ಅನುಗುಣವಾಗುವುದಿಲ್ಲ.

ಶ್ರೀ ಧನಂಜಯ ಕುಮಾರ್.--ಸ್ವಾಮಿ, ನಮ್ಮ ಪಕ್ಷದ ಸ್ಟೇಟ್ ಎಕ್ಸಿಕ್ಯೂಟೀವ್ ಕಮಿಟಿ ಮೀಟಿಂಗ್ ಇಟ್ಟುಕೊಂಡಿದ್ದೇವೆ, ಇದನ್ನು ಸೋಮವಾರಕ್ಕೆ ಮುಂದುವರಿಸಿ ಎಂದು ಹೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.--ಸ್ವಾಮಿ, ಪರಿಷತ್ತಿನಲ್ಲಿ ಸೋಮವಾರ ಇದು ಪಾಸಾಗಲೇಬೇಕು. ಇಲ್ಲದೇ ಇದ್ದರೆ ಲ್ಯಾಪ್ಸ್ ಆಗುತ್ತದೆ. ಸೆಕ್ಷನ್ 63ರಲ್ಲಿ ಪ್ರತಿಯೊಂದು ಸಹಕಾರಿ ಸಂಘವು, ಸಹಕಾರೀ ವರ್ಷ ಮುಗಿದ ಕೂಡಲೇ ಎರಡು ರೀತಿಯ ಬ್ಯಾಲೆನ್ಸ್ ಷೀಟ್ ತಯಾರುಮಾಡಿ ರಿಜಿಸ್ಟ್ರಾರ್ ಆಫ್ ಕೋ-ಆಪರೇಟೀವ್ ಸೊಸೈಟೀಸ್ ಮತ್ತು ಡೈರೆಕ್ಟರ್ ಆಫ್ ಆಡಿಟರ್‌ಗೆ ಕೊಡಬೇಕೆಂದು ಹೇಳಿದ್ದೇವೆ. ಮತ್ತೆ ಹಾಲಿನ ಸಹಕಾರ ಸಂಘಗಳ ಆಪರೇಷನ್ ಫ್ಲಡ್ ಬಗ್ಗೆ ಹೇಳಿದರು. They have said that if we do not create audit board for milk unions and societies, they are not going to give us operation Flood II. We have already formed the audit board for Milk societies and Unions.

ಶ್ರೀ ಎಚ್. ಡಿ. ಚೌಡಯ್ಯ.--ಮಿಲ್ಕ್ ಫೆಡರೇಷನ್ ಎಂದು ಹೇಳಿದ್ದೀರಿ. ಎಂ. ಪಿ. ಸಿ. ಎಸ್. ಗೆ ಮಾಡೋಣ.

ಶ್ರೀ ಆರ್. ಎಲ್. ಜಾಲಪ್ಪ.--ನಮ್ಮ ಮಿತ್ರರು ತಿದ್ದುಪಡಿ ತರುತ್ತಿದ್ದಾರೆ.

ಶ್ರೀ ಹೆಚ್. ಡಿ. ಚೌಡಯ್ಯ.--ಇದೇ ರಾಜಕೀಯ ಇದರಲ್ಲೂ ರಾಜಕೀಯ ಮಾಡುತ್ತೀರಾ ? ನಮ್ಮ ಕೈಯಲ್ಲಿ ಮಾರಾಟ ಮಾಡಿಸಿ.

ಶ್ರೀ ಆರ್. ಎಲ್. ಜಾಲಪ್ಪ.--ನೀವೇ ಮೂವ್ ಮಾಡಿಸಿ. ಸ್ವಾಮಿ, ಸೆಕ್ಷನ್ 72 ಒಳಗೆ ಲಿಕ್ವಿಡೇಷನ್ ಬಂದರೆ ರಿಪೈಸ್ ನೂಡುವುದಕ್ಕೆ ಅವಕಾಶ ಇರಲಿಲ್ಲ. ಈಗ ಅದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಚಾಪ್ಟರ್ 11ರಲ್ಲಿ "ಅಗ್ರಿಕಲ್ಚರಲ್ ಆಂಡ್ ರೂರಲ್ ಡೆವಲಪ್‌ಮೆಂಟ್ ಬ್ಯಾಂಕ್" ಎಂದು ಹೆಸರು ಬದಲಾಯಿಸಿದ್ದೇವೆ. ಇದನ್ನು ನಬಾರ್ಡ್‌ನವರ ಸಲಹೆಯ ಮೇರೆಗೆ ಮಾಡಿದ್ದೇವೆ. ಅಲ್ಪಾವಧಿ ಸಂಸ್ಥೆಗಳು ಕೆಲಸ ಮಾಡದೇ ಇದ್ದರೆ, ದೀರ್ಘಾವಧಿ ಸಂಸ್ಥೆಗಳು ಮಾತ್ರ ಅವರ ಸದಸ್ಯರಿಗೆ ಸಾಲ ಕೊಡಬಹುದೆಂಬ ಸರತ್ತು ಹಾಕಿದ್ದೇವೆ. ಯಾವುದೇ ಸಾಲ ಕೊಡಬೇಕಾದರೂ ಇದುವರೆಗೆ ಲ್ಯಾಂಡೆಡ್ ಸೆಕ್ಯೂರಿಟಿ ಕೊಡಬೇಕಾಗಿತ್ತು. ಹೈಪಾಥಿಕೇಷನ್ ಮೊದಲು ಕೊಡಬೇಕಾಗಿತ್ತು. ಇದನ್ನು ಹಜಾರಿಕಮೀಷನ್

ನವರು ಶಿಫಾರಸ್ಸು ಮಾಡಿದ್ದರು. ಸೆಕ್ಷನ್ 88ರಲ್ಲಿ ಕ್ಯಾಪ್ ಆಟೋಮ್ಯಾಟ್ 12 ತಿಂಗಳಿಗೆ ಮುಗಿಯುವುದನ್ನು ತಪ್ಪಿಸಿ, ಅದನ್ನು 36 ತಿಂಗಳಿಗೆ ವಿಸ್ತರಣೆ ಮಾಡಿದ್ದೇವೆ. ಒಂದು ಕಂತು ಕೊಡದೇ ಹೋದರೂ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನವರು 12 ತಿಂಗಳು ಆದ ಕೂಡಲೇ ಕ್ಯಾಪ್ ಆಟೋಮ್ಯಾಟ್ ತೆಗೆದುಕೊಳ್ಳುತ್ತಿದ್ದರು. ಇದು ಒಂದು ವರ್ಷಕ್ಕೆ ಮಾತ್ರ ಇಡುವುದು ಬೇಡ: ಮೂರು ವರ್ಷ ಇರಲಿ ಎಂದು ತಂದಿದ್ದೇವೆ. ಇನ್ನು ಸೆಕ್ಷನ್ 106ರಲ್ಲಿ ಅಪೀಲು ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಈ ತಿದ್ದುಪಡಿ ಪ್ರಕಾರ ಕೇಸ್ ಡಿಸ್ಮಿಸ್ಡ್ ಆದಕೂಡಲೇ ಅಪೀಲು ಹೋಗಬಹುದು. ಇದುವರೆಗೆ ಬೇರೆಯವರು ಇಯರ್ ಮಾಡಬಹುದಿತ್ತು; ಅದನ್ನು ತೆಗೆದುಹಾಕಿದ್ದೇವೆ. ಸೆಕ್ಷನ್ 109ಕ್ಕೆ ತಂದಿರುವಂಥ ತಿದ್ದುಪಡಿಯಿಂದ ಶಿಕ್ಷೆ ಜಾಸ್ತಿ ಮಾಡಿದ್ದೇವೆ. ಕೆಲವು ಸೊಸೈಟಿಗಳಲ್ಲಿ ಪುಸ್ತಕಗಳನ್ನೇ ಕೊಡುವುದಿಲ್ಲ. ಮಲ್ಲೇಶ್ವರಂ ಕೋ ಆಪರೇಟೀವ್ ಸೊಸೈಟಿಗೆ ಸಂಬಧಪಟ್ಟ ಪುಸ್ತಕಗಳನ್ನು ಪಡೆಯುವುದಕ್ಕೆ ಎರಡು ತಿಂಗಳಿಂದ ಪ್ರಯತ್ನ ಮಾಡುತ್ತಿದ್ದೇವೆ. ಅವರು ಪುಸ್ತಕಗಳನ್ನು ಕೊಟ್ಟಿಲ್ಲ. ಕೆಲವು ಕಡೆ ಸುಟ್ಟು ಹಾಕಿದ್ದಾರೆ. ಪೀನಲ್ಟೈಸ್ ಮಾಡಿದರೆ ಸಹಕಾರ ಸಂಘಗಳನ್ನು ಬೆಳೆಸುವುದಕ್ಕಾಗುವುದಿಲ್ಲ. ದುಡ್ಡು ತೆಗೆದುಕೊಂಡು ಬಡವರಿಗೆ ಮೋಸ ಮಾಡಿದ್ದಾರೆ.

ಈ ಪುಸ್ತಕಗಳನ್ನು ಕೇಳಿದಾಗ ಪುಸ್ತಕಗಳನ್ನೇ ಕೊಡುವುದಿಲ್ಲ, ಬೇನಾಮಿ ಟ್ರಾನ್ಸ್‌ಕ್ಷನ್ ಮಾಡಿ, ಬೇನಾಮಿ ಲೋನ್ಸ್ ಕೊಡತಕ್ಕವರಿಗೆ ತೀವ್ರವಾದ ಶಿಕ್ಷೆಯನ್ನು ಕೊಡಲಿಕ್ಕೆ ಪ್ರಪೋಜ್ ಮಾಡಿದ್ದೇವೆ. ಕೋ ಆಪರೇಟೀವ್ ಎಂಪ್ಲಾಯೀಸ್‌ಗೆ ಗೌರ್ನಮೆಂಟ್ ಅಫಿಶಿಯಲ್ಸ್‌ಗೆ ಕೊಟ್ಟ ಹಾಗೆ ನಮಗೂ ರಕ್ಷಣೆ ಕೊಡಬೇಕೆಂದು ಒಂದು ಡಿಮ್ಯಾಂಡ್ ಇತ್ತು. There was a demand from the employees, So, we have provided that protection to them. These are all the salient features. I think the Hon, Members are convinced that this could be accepted. I request the Hon. Members to kindly accept this.

ಶ್ರೀ ಎಂ ವೀರಪ್ಪಮೊಯ್ಲಿ.— ಈ ಬಿಲ್ಲಿನ ಪ್ರತಿಯನ್ನು ಇವತ್ತು ಬೆಳಿಗ್ಗೆ ತಾನೇ ಕೊಟ್ಟಿದ್ದಾರೆ. ಇದು ಬಹಳ ಗಂಭೀರವಾದಂಥ ಮಸೂದೆಯಾಗಿದೆ. ಇದರ ಬಗ್ಗೆ ಸಾಕಷ್ಟು ಚರ್ಚೆ ಕೂಡ ಆಗಬೇಕಾಗಿದೆ. ಆದುದರಿಂದ ಈಗ ಮಾನ್ಯ ಮುಖ್ಯಮಂತ್ರಿಗಳವರು ಬಜೆಟ್ ಮೇಲೆ ಉತ್ತರ ಕೊಡಲಿ. ಇದನ್ನು ಸೋಮವಾರದ ದಿನಸ ತೆಗೆದುಕೊಳ್ಳಬಹುದು.

ಶ್ರೀ ಆರ್. ಎಲ್. ಜಾಲಪ್ಪ —ಇದು ಇವತ್ತು ಆಗಲೇ ಬೇಕು ಇಲ್ಲದಿದ್ದರೆ ಲ್ಯಾಪ್ಸ್ ಆಗುತ್ತದೆ. ಕಾನೂನಿನ ಇಲಾಖೆಯ ಕಾರ್ಯದರ್ಶಿಯವರೊಡನೆ ಮಾತನಾಡಿದ್ದೇನೆ ಅವರ ಸಲಹೆ ಮೇಗೆ ಇವತ್ತೆ ಪಾಸ್ ಆಗಬೇಕಾಗಿದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ —ಇದರ ಬಗ್ಗೆ ನಾನು ಅಧ್ಯಕ್ಷರ ಕೊಠಡಿಯಲ್ಲಿ ಮಾತನಾಡಿದ್ದೇನೆ. ಇದನ್ನು ಸೋಮವಾರದ ದಿನಸ ತೆಗೆದುಕೊಳ್ಳಬಹುದು. ಇದು ಏನೂ ಲ್ಯಾಪ್ಸ್ ಆಗುವುದಿಲ್ಲ. In the Chambers I have discussed with the Speaker.

ಶ್ರೀ ಎಂ. ರಾಮದೇವ್.--ಮಾನ್ಯ ಶ್ರೀ ರಂಗನಾಥ್‌ರವರು ಇದ್ದಾರೆ. ಅವರಿಗೆ ಒಳ್ಳೆಯ ಅನುಭವವಿದೆ. ಅವರು ಮಾತನಾಡಿ ಏನಾದರೂ ಸಲಹೆ ಇದ್ದರೆ ಕೊಡಬಹುದು.

ಶ್ರೀ ಕೆ. ಎಚ್ ರಂಗನಾಥ್.--ಇವತ್ತೇ ಇದು ಆಗುವುದಿಲ್ಲ. ಇದರಲ್ಲಿ ಸಜಾ ಇದೆ ಮತ್ತು 5 ಸಾವಿರ ದಂಡ ಬೇರೆ ವಿಧಿಸಿದ್ದೀರಿ.

## Announcement

MR. DEPUTY SPEAKER.--The Co-operative Societies (Amendment) Bill, 1984 will be taken up for consideration and passing on Monday, the 27-2-1984 at 9A. M. The House will meet at 9 A.M. on Monday' the 27-2-1984. There will be no Question Hour or Calling Attention Notices or 334 Notices on Monday the 27-2-84. In the morning, the Co-operative Societies (Amendment) Bill, 1984 will be considered and passed at 11 A M. exactly the House wil take up the demands pertaining to PWD Minister.